## ಸುಭಾಷಿತ ಮಂಜರಿ

ನೋಪೇಕ್ಷಿತವ್ಯೋ ವಿದ್ವದ್ಭಿಃ ಶತ್ರುರಲ್ಪೋಪ್ಯವಜ್ಞಯ ।
ವಹ್ನಿರಲ್ಪೋಪಿ ಸಂವೃದ್ಧಃ ಕುರುತೇ ಭಸ್ಮಸಾದ್ವನಮ್ ॥

**ಬಹಳ ಅಲ್ಪನಾದ ಶತ್ರುವನ್ನೂ ಕೂಡ ತಿಳಿದವರು ಎಚ್ಚರದಪ್ಪಿ ಉಪೇಕ್ಷಿಸಬಾರದು. ಬೆಂಕಿ ಬಹಳ ಸಣ್ಣದಾದರೂ ದೊಡ್ಡದಾದಾಗ ವನವನ್ನೇ ಭಸ್ಮಮಾಡಿಬಿಡುತ್ತದೆ.**

ಆತ್ಮೀಯ ಓದುಗರೇ,

ಜನವರಿ ತಿಂಗಳ ವರದಿಗಳನ್ನು ಹೊತ್ತ ಸರಯೂ ನಿಮ್ಮ ಕೈಯಲ್ಲಿದೆ ವಿದ್ಯಾಸಂಸ್ಥೆಯ ಎಲ್ಲಾ ವಿದ್ಯಾರ್ಥಿಗಳು ಸೇರಿ ಆಚರಿಸುವ "ಸರಸ್ವತಿ ಪೂಜೆ" ಈ ಬಾರಿಯ ಪ್ರಮುಖ ಕಾರ್ಯಕ್ರಮ. ನಮ್ಮೆಲ್ಲಾ ಚಟುವಟಿಕೆಗಳ ಪ್ರೇರಣಾ ಕೇಂದ್ರವಾದ ಶ್ರೀರಾಮ ಮಂದಿರದಲ್ಲಿ ಈ ಬಾರಿಯ ಪೂಜಾ ಕಾರ್ಯಕ್ರಮ ನಡೆದುದು ವಿಶೇಷವಾಗಿತ್ತು.

ರಥಸಪ್ತಮಿಯಂದು ನಡೆದ ಸಾಮೂಹಿಕ ಸೂರ್ಯನಮಸ್ಕಾರ ಯಜ್ಞ ಈ ಬಾರಿಯ ಇನ್ನೊಂದು ವಿಶೇಷತೆ. ಎಲ್ಲಾ ವಿಭಾಗಗಳಲ್ಲೂ ವಿಭಾಗವಾರು ಕಾರ್ಯಕ್ರಮಗಳನ್ನು ನಡೆಸಲಾಗಿದ್ದು, ಬೇರೆ ಬೇರೆ ಅವಧಿಗಳಲ್ಲಿ, ವಿವಿಧ ರಚನೆಗಳಲ್ಲಿ ಕಾರ್ಯಕ್ರಮವನ್ನು ಸಂಯೋಜಿಸಲಾಗಿತ್ತು.

ಪ್ರಥಮ ಪಿಯುಸಿಯ ವಾರ್ಷಿಕ ಪರೀಕ್ಷೆಗಳು ಆರಂಭಗೊಳ್ಳುವುದರೊಂದಿಗೆ ಈ ಶೈಕ್ಷಣಿಕ ವರ್ಷವೂ ಕೊನೆಯಾಗಲು ಅಣಿಯಾಗಿದೆ. ಎನ್ನಬಹುದು ಈ ಬಾರಿ ಸುಮಾರು ನೂರಕ್ಕೂ ಹೆಚ್ಚು ಕಾರ್ಯಕ್ರಮಗಳು ವಿದ್ಯಾಕೇಂದ್ರದ ಪರಿಸರದಲ್ಲಿ ನಡೆದಿದ್ದು ಅದೆಲ್ಲವೂ ಈ ಸಂಚಿಕೆಯಲ್ಲಿ ವರದಿಯಾಗಿದೆ.

ವಂದನೆಗಳೊಂದಿಗೆ

ಸಂಪಾದಕ ಬಳಗ

ವಿದ್ಯಾಕೇಂದ್ರದ ಮಧ್ಯಾಹ್ನದ ಭೋಜನ ವ್ಯವಸ್ಥೆಗೆ ಸಂಬಂಧಿಸಿದ 'ಭಿಕ್ಷಾಂದೇಹೀ'ಗೆ ಸಹಕರಿಸುವವರು ಈ ಕೆಳಗಿನ ಖಾತೆಗೆ ದೇಣಿಗೆ ಪಾವತಿಸಬಹುದು

**Acc Name: Sri Rama vidyakendra trust**
**Acc No: 2832500100000101**
**IFSc Code: KARB0000283**
**BANK: KARNATAKA BANK**
**BRACH: GOLTHAMAJALU BRANCH**
**PHONE: 9483292438 (P.R.O)**

ಚಿಂತನರಶ್ಮಿ

## ಮಗುವಿನ ನಂಬಿಕೆ

ನಾವೆಲ್ಲ ಒಮ್ಮೆ ನಮ್ಮ ಊರಿಗೆ ಹೋಗಿದ್ದೆವು.
ಅದೊಂದು ಸಣ್ಣ ಹಳ್ಳಿ. ಹಳೆಯ ದೊಡ್ಡ ಮನೆ. ಸ್ವಲ್ಪ ದಿನ ಅಲ್ಲಿದ್ದು ಈ ಪಟ್ಟಣದ ವೇಗದ ಜೀವನದಿಂದ ಮನಸ್ಸಿನ ಮೇಲೆ ಕವಿದಿದ್ದ ಜಿಡ್ಡನ್ನು ಕಳೆದುಕೊಂಡದ್ದಾಯಿತು.

ಮತ್ತೆ ನಗರಕ್ಕೆ ಹೊರಡಬೇಕೆಂದು ನಮ್ಮ ಸಾಮಾನುಗಳನ್ನೆಲ್ಲ ಕಟ್ಟಿ-ಕೊಂಡು ಹೊರಟೆವು. ಹಿರಿಯರಿಗೆಲ್ಲ ನಮಸ್ಕಾರ ಮಾಡಿ ಹೊರಡುವಾಗ ನಮ್ಮ ಎರಡನೆಯ ಮಗ ಕಾಣಲಿಲ್ಲ. ಎಲ್ಲಿ ಹೋದ ಅವನು? ಮನೆಯಲ್ಲೆಲ್ಲ ಹುಡುಕಾಡಿದ್ದಾಯಿತು. ಆತ ಅಲ್ಲಿ ಇಲ್ಲ. ಅವನಿಗೆ ಆಗ ಕೇವಲ ಒಂದೂವರೆ ವರ್ಷ ವಯಸ್ಸು. ಸ್ವಲ್ಪ ಚಿಂತೆಯೂ ಆಯಿತು. ಹೊರಡುವಾಗ ಎಲ್ಲಿ ಹೋದ ಎಂಬ ಕೋಪವೂ ಬಂತು. ನಾನು ನನ್ನ ಎರಡೂ ಕೈಯಲ್ಲಿ ಎರಡು ಪೆಟ್ಟಿಗೆ ಹಿಡಿದುಕೊಂಡು ಮನೆಯ ಹೊರಗೆ ಬಂದೆ. ಮನೆಯ ಮುಖ್ಯದ್ವಾರದ ಎರಡೂ ಕಡೆಗೆ ಎರಡು ಕಟ್ಟೆಗಳು. ಇವು ಸಾಮಾನ್ಯವಾಗಿ ಎಲ್ಲ ಮನೆಯ ಮುಂದೆಯೂ ಇರುವಂತಹವು. ಒಂದೊಂದು ಕಟ್ಟೆ ಸುಮಾರು ಎರಡೂವರೆ ಅಡಿ ಎತ್ತರದ್ದು, ಗಟ್ಟಿಯಾದ ಕಲ್ಲಿನದು.

ನಾನು ಕೈಯಲ್ಲಿ ಪೆಟ್ಟಿಗೆ ಹೊತ್ತು ಹೊರಗೆ ಬಂದು ನೋಡಿದರೆ ನನ್ನ ಪುಟ್ಟ ಮಗ ಕಟ್ಟೆಯ ಮೇಲೆ ನಿಂತಿದ್ದಾನೆ. ಸಮಾಧಾನವಾಯಿತು. ಆದರೆ ಅವನು ನನ್ನನ್ನು ನೋಡಿದ ತಕ್ಷಣ, "ಅಪ್ಪಾ" ಎಂದವನೇ ಹಾರಿಕೊಂಡು ಬಿಟ್ಟ. ನನ್ನ ಎದೆಬಡಿತ ನಿಂತೇ ಹೋಯಿತು. ನನ್ನ ಎರಡೂ ಕೈ ಖಾಲಿ ಇಲ್ಲ. ನಾನು ಅವನನ್ನು ಹಿಡಿಯದೇ ಹೋದರೆ ಅವನ ಮುಖ ಎದುರಿನ ಕಲ್ಲಿನ ಕಟ್ಟೆಗೆ ಬಡಿಯುತ್ತದೆ. ಆ ಕ್ಷಣ ಏನೂ ತೋರಲಿಲ್ಲ. ಕೈಯಲ್ಲಿಯ ಪೆಟ್ಟಿಗೆಗಳನ್ನು ಕೆಳಗೆ ಒಗೆದು ಹಾರಿದ ಮಗನನ್ನು ಗಟ್ಟಿಯಾಗಿ ಹಿಡಿದು ಅಪ್ಪಿಕೊಂಡೆ. ನನ್ನ ಎದೆ ಬಡಿದುಕೊಳ್ಳುತ್ತಿತ್ತು. ಅವನು ನಗುತ್ತಲೇ ಇದ್ದ. ನಾನು ಕೋಪದಿಂದ, "ಏನೋ ಹಾಗೆ ಹಾರಿಕೊಂಡರೇ? ನಾನು ಹಿಡಿಯದಿದ್ದರೆ ನಿನ್ನ ತಲೆ ಕಟ್ಟೆಗೆ ಬಡಿಯುತ್ತಿರಲಿಲ್ಲವೇ?" ಎಂದೆ. ನಾನು ದಂಗಾಗಿ ಹೋದೆ. ಅಪ್ಪ ತನ್ನನ್ನು ಬೀಳಲು ಬಿಡುವುದಿಲ್ಲ ಎಂಬ ಖಚಿತ ನಂಬಿಕೆ ಅವನಿಗೆ. ಆ ನಂಬಿಕೆಯಿಂದಲೇ ಆತ ನಿಶ್ಚಿಂತನಾಗಿ ಮುಂದೇನಾಗುತ್ತದೆ ಎಂಬ ಸಣ್ಣ ಯೋಚನೆಯನ್ನೂ ಮಾಡದೇ ಹಾರಿಕೊಂಡಿದ್ದ.

ಈ ಘಟನೆ ನನ್ನ ಮೇಲೆ ಬಹುದೊಡ್ಡ ಪರಿಣಾಮವನ್ನುಂಟು ಮಾಡಿತು. ನಮ್ಮಲ್ಲಿ ಅಂಥ ನಂಬಿಕೆ ಇದೆಯೇ?. ಭಗವಂತ ನಮ್ಮ ಕೈ ಬಿಟ್ಟ ಎಂತಲೋ, ನಮ್ಮನ್ನು ಮರೆತುಬಿಟ್ಟ ಎಂತಲೋ ಕೊರಗುತ್ತೇವೆ. ಪುಟ್ಟ ಮಗು ತಾಯಿಯ ಮಡಿಲಲ್ಲಿ ಯಾವ ನಂಬಿಕೆಯಿಂದ ಮಲಗುತ್ತದೋ, ಅಪ್ಪನ ತೋಳಿನಲ್ಲಿ ಹಾರಿಕೊಳ್ಳುತ್ತದೋ ಆ ವಿಶ್ವಾಸದಿಂದ, ನಂಬಿಕೆಯಿಂದ ಭಗವಂತನಲ್ಲಿ ಹಾರಿಕೊಂಡರೆ ಆತ ನಮ್ಮ ಕೈ ಬಿಡಲಾರ.

ಆ ನಂಬಿಕೆ ನಮ್ಮಲ್ಲಿ, ನಾವು ಮಾಡುವ ಕೆಲಸದಲ್ಲಿ, ಭಗವಂತನಲ್ಲಿ ಬಂದರೆ ಯಾವ ಕಾರ್ಯವೂ ಸಫಲವಾದೀತು.

■

## ಶಿಶುಮಂದಿರ

**ಸರಸ್ವತಿ ಶಿಶುಮಂದಿರ ಕೊಪ್ಪಲಕೊಡಿ ಭಜನಾ ಕಾರ್ಯಕ್ರಮ** – 5.1.2018

ಶ್ರೀ ಕೋದಂಡರಾಮ ಭಜನಾ ಮಂದಿರದ 30ನೇ ವಾರ್ಷಿಕೋತ್ಸವದ ಪ್ರಯುಕ್ತ ನಡೆದ "ಏಕಾಹ ಭಜನೆ"ಯಲ್ಲಿ ಶಿಶುಮಂದಿರದ 21 ಮಕ್ಕಳು ಹಾಗೂ ಪಾಲಕರು ಸೇರಿ ಭಜನಾ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

**ಮಕರ ಸಂಕ್ರಾತಿ–14/1/2018**

* ಶ್ರೀರಾಮ ಶಿಶುಮಂದಿರ ಕಲ್ಲಡ್ಕದ ವತಿಯಿಂದ ಕಲ್ಲಡ್ಕದ ಪರಿಸರದಲ್ಲಿ 450 ಮನೆಗಳಿಗೆ ತೆರಳಿ ಎಳ್ಳು ಬೆಲ್ಲ, ಅರಶಿನ ಕುಂಕುಮ, ಹೂ ನೀಡುವುದರ ಮೂಲಕ ಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

* ಶ್ರೀ ಗಣೇಶ ಶಿಶುಮಂದಿರ ಬೊಂಡಾಲದ ಪರಿಸರದಲ್ಲಿ 80 ಮನೆಗಳಿಗೆ, ಶ್ರೀ ಕೃಷ್ಣ ಶಿಶುಮಂದಿರ ಸಜೀಪದ ಪರಿಸರದಲ್ಲಿ 100 ಮನೆಗಳಿಗೆ, ಶ್ರೀ ಅಕ್ಕಮಹಾದೇವಿ ಶಿಶುಮಂದಿರ ಅಜ್ಜಿಬೆಟ್ಟು ಪರಿಸರದಲ್ಲಿ 98 ಮನೆಗಳಿಗೆ ಹಾಗೂ ಶ್ರೀ ಸರಸ್ವತಿ ಶಿಶುಮಂದಿರ ಶೇಡಿಗುರಿ ಪರಿಸರದಲ್ಲಿ 150 ಮನೆಗಳಿಗೆ ತೆರಳಿ ಸಂಕ್ರಾಂತಿಯ ಶುಭಾಶಯವನ್ನು ತಿಳಿಸಿದರು.

**ಕೊಬ್ಬರಿ ಮಿಠಾಯಿ ಪ್ರಾತ್ಯಕ್ಷಿಕೆ – 19/1/2018**

ಶ್ರೀ ಗುರೂಜಿ ಜನ್ಮದಿನದ ನಿಮಿತ್ತ ಆಯೋಜಿಸಲಾದ ಸಹಭೋಜನಕ್ಕೆ ಪೋಷಕರೇ ತಯಾರಿಸಿ ತರಬೇಕಿದ್ದ ಕೊಬ್ಬರಿ ಮಿಠಾಯಿಯನ್ನು ತಯಾರಿಸುವ ಪ್ರಾತ್ಯಕ್ಷಿಕೆಯ ಶ್ರೀಮತಿ ಶುಭಲಕ್ಷ್ಮಿ ಶಿವಗಿರಿ ಇವರು ನಡೆಸಿಕೊಟ್ಟರು. 30 ಮಂದಿ ತಾಯಂದಿರು ಇದರ ಸದುಪಯೋಗವನ್ನು ಪಡೆದುಕೊಂಡರು.


### ಸಂಪಾದಕೀಯ ಮಂಡಳಿ

**ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :**
ನಾರಾಯಣ ಸೋಮಯಾಜಿ
ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ
**ಕಾರ್ಯನಿರ್ವಾಹಕ ಸಂಪಾದಕರು :**
ಕೃಷ್ಣಪ್ರಸಾದ ಕಾಯರ್‌ಕಟ್ಟೆ
**ಸಹಸಂಪಾದಕರು :**
ಪೂರ್ಣಿಮಾ (ಶಿಶುಮಂದಿರ)
ರೂಪಕಲಾ (ಪ್ರಾಥಮಿಕ ಶಾಲೆ)
ಮನೋಜ್ (ಪ್ರೌಢಶಾಲೆ)
ಹರ್ಷಿತಾ (ಪಿ.ಯು.ಸಿ)
ಶೈಲಜಾ (ಪದವಿ)
ವಿನುತ ಎಸ್.ಎನ್. (ಮಕ್ಕಳ ಪುಟ)
**ವ್ಯವಸ್ಥಾಪಕ ಸಂಪಾದಕರು :** ಕುಶಾಲಪ್ಪ ಅಮ್ಟೂರು


## ಪ್ರಾಥಮಿಕ

**ನೇತಾಜಿ ಜನ್ಮದಿನಾಚರಣೆ.**

ಕಾರ್ಯಕ್ರಮದಲ್ಲಿ ನೇತಾಜಿ ಸುಭಾಶ್ಚಂದ್ರ ಬೋಸ್‌ರವರ ಆದರ್ಶಗಳ ಕುರಿತು ಪದವಿ ಪೂರ್ವ ವಿಭಾಗದ ಕನ್ನಡ ಉಪನ್ಯಾಸಕರು ಶ್ರೀ ಅಶೋಕ್ ಇವರು ಮಾತನಾಡಿದರು. ವೇದಿಕೆಯಲ್ಲಿ ಮುಖ್ಯೋಪಾಧ್ಯಾಯರು ಶ್ರೀ ರವಿರಾಜ್, ಶ್ರೀಮತಿ ಅನ್ನಪೂರ್ಣ ಉಪಸ್ಥಿತರಿದ್ದರು. ಕುಮಾರಿ ಲಕ್ಷ್ಮಿ ನಿರೂಪಿಸಿ, ಶ್ರೀಮತಿ ಹೇಮಲತಾ ಸ್ವಾಗತಿಸಿ, ಶ್ರೀಮತಿ ರೂಪಕಲಾ ವಂದಿಸಿದರು.

**'ವಿಶ್ವ ಕೈಬರಹ' ದಿನದ ಆಚರಣೆ.**

1061 ವಿದ್ಯಾರ್ಥಿಗಳು ಏಕಕಾಲಕ್ಕೆ ಸ್ವತಃ ಕೈ ಬರಹದಿಂದ ತಮ್ಮ ಶಾಲೆಯ ಬಗ್ಗೆ ಅಭಿಪ್ರಾಯವನ್ನು ವ್ಯಕ್ತಪಡಿಸುವ ಮೂಲಕ "ವಿಶ್ವ ಕೈ ಬರಹ ದಿನ" ಆಚರಿಸಿದರು. ಕಾರ್ಯಕ್ರಮದ ಮಹತ್ವವನ್ನು ಶ್ರೀ ಸುಮಂತ್ ಆಳ್ವ ರವರು ತಿಳಿಸುತ್ತಾ "ತಂತ್ರಜ್ಞಾನ ಪ್ರಸ್ತುತ ಕಾಲಕ್ಕೆ ಸೂಕ್ತವಾಗಿರಬಹುದು. ಆದರೆ ವೇದ ವಿಜ್ಞಾನ, ರಾಮಾಯಾಣ, ಮಹಾಭಾರತ, ಇತಿಹಾಸ ಎಲ್ಲವೂ ದಾಖಲಾಗಿರುವುದು ಕೈ ಬರಹದ ಮೂಲಕವೇ, ಕೈ ಬರಹದಿಂದ ವಿದ್ಯಾರ್ಥಿಗಳಲ್ಲಿ ಸ್ವ ಆಲೋಚನಾ ಶಕ್ತಿ ಮತ್ತು ಸಾಹಿತ್ಯದ ಬೆಳವಣಿಗೆಯಾಗುತ್ತದೆ" ಎಂದರು.

## ಪ್ರೌಢಶಾಲೆ

**ವಿವೇಕಾನಂದ ಜಯಂತಿ** ದಿ:12.01.2018

ಭಾರತೀಯ ಹಾಗೂ ಹಿಂದೂ ವಿಚಾರಧಾರೆಗಳನ್ನು ಜಗತ್ತಿನಾದ್ಯಂತ ಪಸರಿಸಿದ ಶ್ರೇಷ್ಠ ಸಂತ ಸ್ವಾಮಿ ವಿವೇಕಾನಂದರು. ಸ್ವಾಮಿ ವಿವೇಕಾನಂದರ ಮಾತು ಮತ್ತು ಜೀವನ ನಮ್ಮೆಲ್ಲರಿಗೂ ಪ್ರೇರಣೆ ಎಂದು ಶ್ರೀಮತಿ ಆಶಾಪ್ರಸಾದ್ ವಕೀಲರು ಬಿ.ಸಿ.ರೋಡು ತಿಳಿಸಿದರು. ಈ ಸಂದರ್ಭದಲ್ಲಿ ವೇದಿಕೆಯಲ್ಲಿ ಉಮೇಶ್ ನಿರ್ಮಲ್, ಚಂದ್ರಹಾಸ ಶೆಟ್ಟಿ, ಸವಿತಾ ನಿರ್ಮಲ್, ಹಿರಿಯ ಶಿಕ್ಷಕಿ ಶ್ರೀಮತಿ ವಸಂತಿ ಉಪಸ್ಥಿತರಿದ್ದು, ಶ್ರೀ ಜಿನ್ನಪ್ಪ ಕಲಾ ಶಿಕ್ಷಕ ಕಾರ್ಯಕ್ರಮವನ್ನು ನಿರೂಪಿಸಿದರು.

**ವೈದ್ಯಕೀಯ ತಪಾಸಣೆ ದಿ:18.01.2018**

ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮದ ವತಿಯಿಂದ ವೈದ್ಯಕೀಯ ತಪಾಸಣೆಯನ್ನು R.B.S.K. ವೈದ್ಯಾಧಿಕಾರಿಗಳಾದ ಡಾ। ಹೇಮ ಪ್ರಭಾ ಹಾಗೂ ಡಾ। ಮುಸ್ತಾಫ ಇವರು ನಡೆಸಿದರು.

**ರಾಷ್ಟ್ರೀಯ ಮತದಾರರ ದಿನ ದಿ:25.01.2018**

ಕಲಾ ಶಿಕ್ಷಕರಾದ ಶ್ರೀ ಜಿನ್ನಪ್ಪ ಮತದಾನ ದಿನದ ಮಹತ್ವವನ್ನು ತಿಳಿಸಿದರು. 9ನೇ ತರಗತಿಯ ಕೀರ್ತಿ ವಿದ್ಯಾರ್ಥಿಗಳಿಗೆ ಮತದಾರರ ದಿನದ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು. ಈ ಸಂದರ್ಭದಲ್ಲಿ ಮುಖ್ಯ ಶಿಕ್ಷಕರಾದ ಶ್ರೀ ರಮೇಶ ಎನ್ ಉಪಸ್ಥಿತರಿದ್ದರು.

**ಗಣರಾಜ್ಯೋತ್ಸವ ಕಾರ್ಯಕ್ರಮ ದಿ:26.01.2018**

ವಿದ್ಯಾಕೇಂದ್ರದ ಅಧ್ಯಕ್ಷರಾದ ಶ್ರೀ ನಾರಾಯಣ ಸೋಮಯಾಜಿ ಧ್ವಜಾರೋಹಣ ನೆರವೇರಿಸಿದರು. "ಭಾರತ ಲಕ್ಷಾನುಲಕ್ಷ ವರ್ಷಗಳ ಹಿಂದೆಯೇ ಗಣರಾಜ್ಯ ರಾಷ್ಟ್ರವಾಗಿತ್ತು. ಶ್ರೀ ರಾಮಚಂದ್ರನ ರಾಮರಾಜ್ಯ ಪ್ರಜಾಪ್ರಭುತ್ವಕ್ಕೆ ಶ್ರೇಷ್ಠ ಉದಾಹರಣೆಯಾಗಿದೆ. ಶ್ರೀರಾಮನ ರಾಜ್ಯದಲ್ಲಿ ಪ್ರಜೆಗಳ ಮಾತಿಗೆ ಮನ್ನಣೆಯಿತ್ತು. ಪ್ರಜೆಗಳ ಮಾತಿಗೆ ಮನ್ನಣೆ ದೊರೆತಾಗ ಪ್ರಜಾಪ್ರಭುತ್ವ ಯಶಸ್ವಿಯಾಗುತ್ತದೆ". ಎಂದು ವಿದ್ಯಾಕೇಂದ್ರದ ಸಂಚಾಲಕರಾದ ಶ್ರೀ ವಸಂತ ಮಾಧವ ತಿಳಿಸಿದರು. ಕಾರ್ಯಕ್ರಮದಲ್ಲಿ ಡಾ। ಸುಕೇಶ್ ಕೊಟ್ಟಾರಿ ದಂಪತಿಗಳು, ವಿದ್ಯಾಕೇಂದ್ರದ ಕೋಶಾಧಿಕಾರಿ ಶ್ರೀ ಸತೀಶ್ ಭಟ್ ಶಿವಗಿರಿ, ಪದವಿ, ಪದವಿಪೂರ್ವ, ಪ್ರೌಢ, ಪ್ರಾಥಮಿಕ ಶಾಲಾ ಮುಖ್ಯಸ್ಥರು ಉಪಸ್ಥಿತರಿದ್ದರು.

**ಸಾಮೂಹಿಕ ಹುಟ್ಟುಹಬ್ಬ, ಭಜನಾ ಕಾರ್ಯಕ್ರಮ**

ಮಂಗಳೂರು ಶ್ರೀನಿವಾಸ ಮೆಡಿಕಲ್ ಕಾಲೇಜಿನ ಪ್ರೊಫೆಸರ್ ಡಾ। ಸುಕೇಶ್ "ವಿದ್ಯಾಕೇಂದ್ರದಲ್ಲಿ ನೀಡುತ್ತಿರುವ ಸಂಸ್ಕಾರಯುತ ಶಿಕ್ಷಣ ನನ್ನ ವೃತ್ತಿಜೀವನದಲ್ಲಿ ಉತ್ತಮ ಸಾಧನೆ ಮಾಡಲು ಪ್ರೇರಣೆ ನೀಡಿದೆ"ಎಂದರು. ವೇದಿಕೆಯಲ್ಲಿ ಅತಿಥಿಗಳಾಗಿ ಶ್ರೀಮತಿ ಶ್ರುತಿ ಸುಕೇಶ್, ಪ್ರೌಢಶಾಲಾಭಿವೃದ್ಧಿ ಸಮಿತಿಅಧ್ಯಕ್ಷರಾದ ಶ್ರೀ ವಿಶ್ವನಾಥ ಪ್ರಭು, ಶಾಲಾ ಮುಖ್ಯ ಶಿಕ್ಷಕರಾದ ಶ್ರೀ ರಮೇಶ್‌ಎನ್ ಉಪಸ್ಥಿತರಿದ್ದರು. ಸಾಮೂಹಿಕ ಹುಟ್ಟುಹಬ್ಬ ಆಚರಿಸುವ ವಿದ್ಯಾರ್ಥಿಗಳು ಭಾರತಮಾತೆಗೆ ಪುಷ್ಪಾರ್ಚನೆಗೈದು, ಹಿರಿಯರಿಂದ ತಿಲಕಧಾರಣೆ ಮಾಡಿಸಿ ಆಶೀರ್ವಾದ ಪಡೆದು–ಕೊಂಡರು. ವಿದ್ಯಾರ್ಥಿಗಳಾದ ಸುರಕ್ಷಾ, ಭವ್ಯ ಗಣರಾಜ್ಯೋತ್ಸವದ ಮಹತ್ವವನ್ನು ತಿಳಿಸಿದರು. ಕಾರ್ಯಕ್ರಮದಲ್ಲಿ ಸುಶ್ಮಿತಾ ಸ್ವಾಗತಿಸಿ, ಪ್ರತೀಕಾ ನಿರೂಪಿಸಿ, ಶಮಿತಾ ವಂದಿಸಿದರು.

**ವಲಯ ಮಟ್ಟದ ಕ್ರೀಡಾ ಪ್ರತಿಭೋತ್ಸವ**

ಬಾಲವಿಕಾಸ ಆಂಗ್ಲಮಾಧ್ಯಮ ಶಾಲೆ ಕ್ರೀಡಾಂಗಣದಲ್ಲಿ ನಡೆದ ವಲಯ ಮಟ್ಟದ ಕ್ರೀಡಾ ಪ್ರತಿಭೋತ್ಸವದಲ್ಲಿ 19 ಕ್ರೀಡಾಪಟುಗಳು ಭಾಗವಹಿಸಿದ್ದು, 11 ಕ್ರೀಡಾಪಟುಗಳು ತಾಲೂಕು ಮಟ್ಟದ ಕ್ರೀಡಾ ಪ್ರತಿಭೋತ್ಸವಕ್ಕೆ ಆಯ್ಕೆಯಾಗಿದ್ದಾರೆ. ಸುಜಯ್(9ನೇ) 100ಮೀ ಓಟದಲ್ಲಿ ದ್ವಿತೀಯ, ಸ್ವದೇಶ್ (9ನೇ) ಎತ್ತರ ಜಿಗಿತದಲ್ಲಿ ದ್ವಿತೀಯ, ಅಭಿಷೇಕ್(9ನೇ) ಎತ್ತರ ಜಿಗಿತದಲ್ಲಿ ತೃತೀಯ, ವರುಣ್(9ನೇ) 1500 ಮೀಓಟದಲ್ಲಿ ಪ್ರಥಮ, ಕಿಷ್ಕಿಂಗ್ ತನ್ (9 ನೇ) ಗುಂಡು ಎಸೆತದಲ್ಲಿ ಪ್ರಥಮ, ನಿಖಿಲ್(8ನೇ) ಗುಂಡು ಎಸೆತದಲ್ಲಿ ತೃತೀಯ, ಕೃಪೇಶ್(8 ನೇ) ಉದ್ದಜಿಗಿತದಲ್ಲಿ ಪ್ರಥಮ, ಎಂಕಿ (9ನೇ) ಈಟಿ ಎಸೆತದಲ್ಲಿ ದ್ವಿತೀಯ

ಅಖಿಲಾ (9ನೇ) 800ಮೀ ಓಟದಲ್ಲಿ ಪ್ರಥಮ, ವಿಸ್ಮಿತಾ(8 ನೇ) ಎತ್ತರ ಜಿಗಿತದಲ್ಲಿ ತೃತೀಯ, ಶಿಪಾಲಿ (9ನೇ) ಎತ್ತರ ಜಿಗಿತದಲ್ಲಿ ಚತುರ್ಥ, ಜಿತೇಶ್ (9ನೇ) 1500ಮೀ ನಲ್ಲಿ ಪಂಚಮ ಸ್ಥಾನ ಪಡೆದುಕೊಂಡಿರುತ್ತಾರೆ.

**ವಿಶೇಷ ಚೇತನರ ಕ್ರೀಡಾಕೂಟ**

ದಿನಾಂಕ 18.01.2018 ಮತ್ತು 19.01.2018ರಂದು ಮಂಗಳೂರಿನ ವಾಮಂಜೂರಿನಲ್ಲಿ ನಡೆದ ರಾಜ್ಯಮಟ್ಟದ 'ವಿಶೇಷ ಚೇತನರ ಕ್ರೀಡಾಕೂಟ'ದಲ್ಲಿ ಬೇಬಿ 10ನೇ ತರಗತಿ ಗುಂಡು ಎಸೆತದಲ್ಲಿ 5ನೇ ಸ್ಥಾನವನ್ನು ಪಡೆದು ಕೊಂಡಿದ್ದಾನೆ.

**ಒಲಿಂಪಿಕ್ ಕ್ರೀಡಾಕೂಟ**

20.01.2018ರಂದು ಮಂಗಳೂರಿನ ಮಂಗಳಾ ಕ್ರೀಡಾಂಗಣದಲ್ಲಿ ನಡೆದ ಒಲಿಂಪಿಕ್ ಕ್ರೀಡಾಕೂಟದಲ್ಲಿ ವರುಣ್ 9ನೇ, ಸುಜೇಯ್ 9ನೇ, ಕಿರಣ್ 8ನೇ, ರೋಹನ್ 8ನೇ, ಪ್ರಿಯಾ 8ನೇ, ಲಿಖಿತ್ 8ನೇ ತರಗತಿ 6 ಕ್ರೀಡಾಪಟುಗಳು ಭಾಗವಹಿಸಿದರು.

## ಪದವಿ ಪೂರ್ವ

* ದಿನಾಂಕ 01/01/18 ರಂದು ಸರಸ್ವತಿ ಪೂಜೆ-ಯ ಪ್ರಯುಕ್ತ ಕಳೆಕೋಡಿ ಸೂರ್ಯನಾರಾಯಣ ಭಟ್‌ರವರು ವಿದ್ಯಾರ್ಥಿಗಳಿಗೆ ಸರಸ್ವತಿ ಶ್ಲೋಕವನ್ನು ಅಭ್ಯಾಸ ಮಾಡಿಸಿದರು.

* ದಿನಾಂಕ 01/01/18 ರಂದು ಪದವಿ ವಿಭಾಗದ ಪ್ರಾಂಶುಪಾಲ ಶ್ರೀ ಕೃಷ್ಣಪ್ರಸಾದ್ ಇವರು ವಿದ್ಯಾರ್ಥಿಗಳಿಗೆ ಉದ್ಯೋಗ ಮಾಹಿತಿ ನೀಡಿದರು.

* ದಿನಾಂಕ 05/01/18 ರಂದು ನಿವೃತ್ತ ಪ್ರೊ. ರಾಜಮಣಿ ರಾಮಕುಂಜರಿಂದ 'ಪ್ಲಾಸ್ಟಿಕ್ ದುಷ್ಪರಿಣಾಮದ ಅರಿವು' ಎಂಬ ವಿಷಯದ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು. ವೇದಿಕೆಯಲ್ಲಿ ಪ್ರಾಚಾರ್ಯರಾದ ವಸಂತ ಬಲ್ಲಾಳ್ ಹಾಗೂ ಮಧಾ ರಾಮಕುಂಜ ಉಪಸ್ಥಿತರಿದ್ದರು.

* ದಿನಾಂಕ 07/01/18 ರಂದು ಇಡ್ಕಿದು ಗ್ರಾಮ ಭೇಟಿಯಲ್ಲಿ ಸಾವಯವ ಕೃಷಿ, ಮಿಶ್ರ ಕೃಷಿ, ಹಾಲು ಉತ್ಪಾದನೆ, ಮಳೆ ನೀರು ಸಂಗ್ರಹಣೆ, ಪಶು ಸಂಗೋಪನೆಯ ಬಗ್ಗೆ ವಿದ್ಯಾರ್ಥಿಗಳಿಗೆ ಪ್ರಾತ್ಯಕ್ಷಿಕೆ ನೀಡಲಾಯಿತು.

**ವಿವೇಕಾನಂದರ ಜನ್ಮ ದಿನಾಚರಣೆ 09/01/18**

ನಲಂದಾ ಪದವಿ ಕಾಲೇಜಿನ ವಾಣಿಜ್ಯ ಶಾಸ್ತ್ರ ಉಪನ್ಯಾಸಕರಾದ ಶ್ರೀವತ್ಸ. ಎನ್ ವಿವೇಕಾನಂದರ ಜೀವನದ ಘಟನೆಗಳನ್ನು ವಿದ್ಯಾರ್ಥಿಗಳೊಂದಿಗೆ ಹಂಚಿಕೊಂಡರು. ವೇದಿಕೆಯಲ್ಲಿ ಕಾಲೇಜಿನ ಅರ್ಥಶಾಸ್ತ್ರ ಉಪನ್ಯಾಸಕಿಯಾದ ಶ್ರೀಮತಿ ವಿಲಾಸಿನಿ ಮಾತಾಜಿ ಉಪಸ್ಥಿತರಿದ್ದು, ವಾಣಿಜ್ಯ ವಿಭಾಗದ ಲಕ್ಷ್ಮೀಶ ಮಯ್ಯ ಕಾರ್ಯಕ್ರಮವನ್ನು ನಿರೂಪಿಸಿದರು.

**ದ್ವಿ.ಪಿ.ಯು.ಸಿ ವಿದ್ಯಾರ್ಥಿಗಳ ಪೋಷಕರ ಸಭೆ**

ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಶೈಕ್ಷಣಿಕ ವಿಚಾರಗಳು ಹಾಗೂ ಮುಂಬರುವ ವಾರ್ಷಿಕ ಪರೀಕ್ಷೆಯ ತಯಾರಿಯಲ್ಲಿ ಪೋಷಕರ ಪಾತ್ರದ ಬಗ್ಗೆ ಸಂಸ್ಥೆಯ ಹಿರಿಯರು ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಸಂಚಾಲಕರಾದ ಶ್ರೀ ವಸಂತ ಮಾಧವ, ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಡಾ॥ ಪ್ರಭಾಕರ್ ಭಟ್ ಕಲ್ಲಡ್ಕ, ಪದವಿ ಕಾಲೇಜಿನ ಪ್ರಾಂಶುಪಾಲರು ಶ್ರೀ ಕೃಷ್ಣಪ್ರಸಾದ್ ಉಪಸ್ಥಿತರಿದ್ದರು. ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರು ಶ್ರೀ ವಸಂತ ಬಲ್ಲಾಳ್ ಸ್ವಾಗತಿಸಿ ಪ್ರಸ್ತಾವನೆ ಮಾತುಗಳನ್ನಾಡಿದರು. ಕು. ಶೈಲಿನಿ ಕಾರ್ಯಕ್ರಮ ನಿರೂಪಿಸಿ, ಕು. ತೇಜಸ್ವಿನಿ ವಂದಿಸಿದರು.

**ಮಿಲಿಟರಿಯ ಬಗ್ಗೆ ಮಾಹಿತಿ ಕಾರ್ಯಗಾರ 25.01.18**

ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಡಾ॥ ಪ್ರಭಾಕರ್ ಭಟ್ ಕಲ್ಲಡ್ಕ, ಇವರಿಂದ ಪದವಿ ಪೂರ್ವ ವಿಭಾಗದ ಮಕ್ಕಳಿಗೆ ಮಿಲಿಟರಿಯ ಬಗ್ಗೆ ಮಾಹಿತಿ ಕಾರ್ಯಗಾರ ನಡೆಸಲಾಯಿತು. ಆಸಕ್ತ 60 ವಿದ್ಯಾರ್ಥಿಗಳು ಭಾಗವಹಿಸಿದ್ದರು.

**ಮತದಾರರ ಪ್ರತಿಜ್ಞಾ ವಿಧಿ ಬೋಧನೆ 25/01/18**

ಭಾರತ ಚುನಾವಣಾ ಆಯೋಗದ ಸಹಭಾಗಿತ್ವದಲ್ಲಿ ಮತದಾರರ ಪ್ರತಿಜ್ಞಾ ವಿಧಿಯನ್ನು ವಿದ್ಯಾರ್ಥಿಗಳಿಗೆ ಬೋಧಿಸಲಾಯಿತು. ಮತದಾನದ ಪ್ರಕ್ರಿಯೆ ಹಾಗೂ ಹಲವಾರು ವಿಚಾರಗಳ ಕುರಿತು ಮಾಹಿತಿಯನ್ನು ನೀಡಲಾಯಿತು.

**ವಾರ್ಷಿಕ ಭಜನೆ 31/01/18**

ವಿದ್ಯಾರ್ಥಿ ಸಂಘದ ವತಿಯಿಂದ ಜನವರಿಯಿಂದ ಮೇ ತಿಂಗಳವರೆಗೆ ಹುಟ್ಟುಹಬ್ಬ ಆಚರಿಸಿಕೊಳ್ಳುವ ವಿದ್ಯಾರ್ಥಿಗಳು ಶ್ರದ್ಧಾನಿಧಿಯನ್ನು ಸಮರ್ಪಿಸಿದರು. ಸಭಾ ಕಾರ್ಯಕ್ರಮದಲ್ಲಿ ಕಬಕ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಪ್ರೇಮಲತಾ ಹಾಗೂ ಪ.ಪೂ ವಿಭಾಗದ ಪ್ರಾಂಶುಪಾಲರಾದ ವಸಂತ ಬಲ್ಲಾಳ್ ಉಪಸ್ಥಿತರಿದ್ದು, ಕನ್ನಡ ಉಪನ್ಯಾಸಕ ಶ್ರೀ ಯತಿರಾಜ್ ಇವರು ಭಜನೆಯ ಮಹತ್ವವನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು. ಶ್ರೀಮತಿ ಜಯಲಕ್ಷ್ಮೀ ಕಾರ್ಯಕ್ರಮವನ್ನು ನಿರೂಪಿಸಿದರು.

**ಪೂರ್ಣ ಚಂದ್ರಗ್ರಹಣದ ಬಗ್ಗೆ ಮಾಹಿತಿ 31/01/18:**

ಭೌತಶಾಸ್ತ್ರದ ಉಪನ್ಯಾಸಕರಾದ ಪ್ರಶಾಂತ್ ಶ್ರೀಮಾನ್ ಪೂರ್ಣ ಚಂದ್ರಗ್ರಹಣದ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿಯನ್ನು ನೀಡಿದರು.

**ಚೈತನ್ಯ ಕಾರ್ಯಗಾರ 13/01/18**

ತಮ್ಮ ವೃತ್ತಿ ಕೌಶಲ್ಯವನ್ನು ಮತ್ತಷ್ಟು ಅಭಿವೃದ್ಧಿಗೊಳಿಸುವುದರ ಬಗ್ಗೆ ನರೇಂದ್ರ ಪಿ.ಯು.ಕಾಲೇಜಿನಲ್ಲಿ ನಡೆಸಿದ ಚೈತನ್ಯ ಕಾರ್ಯಗಾರದಲ್ಲಿ ಪದವಿಪೂರ್ವ ವಿಭಾಗದ ಉಪನ್ಯಾಪಕರು ಭಾಗವಹಿಸಿದರು.

**ಶೈಕ್ಷಣಿಕ ಮಾಹಿತಿ**

ಪದವಿಪೂರ್ವ ವಿಭಾಗದ ಉಪನ್ಯಾಸಕರು ಸರಕಾರಿ ಪ್ರೌಢಶಾಲೆ ಕೊಡ್ಮಣ್, ಹಾಗೂ ಜಗನ್ನಾಥ ಶೆಟ್ಟಿ ಸ್ಮಾರಕ ಸರಕಾರಿ ಪ್ರೌಢಶಾಲೆ ಶಂಭೂರು, ಸರಕಾರಿ ಪ್ರೌಢಶಾಲೆ ಕಡೇಶಿವಾಲಯ ಮತ್ತು ಶ್ರೀರಾಮ ಪ್ರೌಢಶಾಲೆ ಕಲ್ಲಡ್ಕಕ್ಕೆ ಭೇಟಿ ನೀಡಿ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಪದವಿಪೂರ್ವ ವಿಭಾಗದ ಶಿಕ್ಷಣದ ವಿಶೇಷತೆ ಬಗ್ಗೆ ಮಾಹಿತಿ ನೀಡಿದರು.

## ಪದವಿ

**ಸರಸ್ವತಿ ಮಂತ್ರದ ದೀಕ್ಷೆ 02.01.2018**

ಸರಸ್ವತಿ ಪೂಜೆ-ಯ ನಿಮಿತ್ತ ವಿದ್ಯಾರ್ಥಿಗಳಿಗೆ ಕಳೆಕೋಡಿ ಸೂರ್ಯನಾರಾಯಣ ಭಟ್ ಇವರು ಸರಸ್ವತಿ ಮಂತ್ರವನ್ನು ಅಭ್ಯಾಸ ಮಾಡಿಸಿದರು.

**10.1.2018:ಅಂತರ್ ಕಾಲೇಜು ಅಥ್ಲೆಟಿಕ್ಸ್ ಸ್ಪರ್ಧೆ**

ದಿನಾಂಕ 10, 11, 12ರಂದು P. Dayananda Pai, Sathish Pai Govt College ಮಂಗಳೂರು ಇವರು ಆಯೋಜಿಸಿದ್ದ 37ನೇ ಮಹಿಳಾ ಮತ್ತು ಪುರುಷರ ಮಂಗಳೂರು ವಿಶ್ವವಿದ್ಯಾನಿಲಯ ಮಟ್ಟದ ಅಂತರ್ ಕಾಲೇಜು ಅಥ್ಲೆಟಿಕ್ ಸ್ಪರ್ಧೆಯಲ್ಲಿ ಪದವಿ ವಿಭಾಗದ 11 ವಿದ್ಯಾಥಿಗಳು ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿರುತ್ತಾರೆ. ದ್ವಿತೀಯ ಬಿಕಾಂ ಶ್ರುತಿ 21 ಕಿ.ಮೀ. ಹಾಫ್ ಮ್ಯಾರಥಾನ್ ಸ್ಪರ್ಧೆಯಲ್ಲಿ 6ನೇ ಸ್ಥಾನ, ಅಂತಿಮ ಬಿಕಾಂ ಅಂತಿಮ ಬಿಕಾಂ ಲಾವಣ್ಯ 7ನೇ ಸ್ಥಾನ ಮತ್ತು ಅಂತಿಮ ಬಿಕಾಂ ಪಲ್ಲವಿ walk race ನಲ್ಲಿ 6ನೇ ಸ್ಥಾನ ಪಡೆದಿರುತ್ತಾರೆ.

**Flower Decoration ಸ್ಪರ್ಧೆ12.1.2018:**

ಪ್ರದೀಪ್ತ ಸಾಂಸ್ಕೃತಿಕ ಸಂಘದ ವತಿಯಿಂದ ಪದವಿ ಕಾಲೇಜು ಪ್ರತಿಭಾ ದಿನೋತ್ಸವದ ಪ್ರಯುಕ್ತ Flower Decoration ಸ್ಪರ್ಧೆಯನ್ನು ಏರ್ಪಡಿಸಲಾಯಿತು. ಒಟ್ಟು 10 ವಿದ್ಯಾರ್ಥಿಗಳ ತಂಡ ಭಾಗವಹಿಸಿದ್ದು, ಉದ್ಯೋಗ ಮಾಹಿತಿ ಕೇಂದ್ರದ ನಿರ್ದೇಶಕ ಉದಯ, ಪದವಿ ಪೂರ್ವ ವಿಭಾಗದ ಉಪನ್ಯಾಸಕರಾದ ಯಶಸ್ವಿನಿ ಮತ್ತು ಸ್ವಾತಿ ತೀರ್ಪುಗಾರರಾಗಿ ಆಗಮಿಸಿದ್ದರು.

**ಕದಿಕೆ ತುಳು ಸಂಘದ ವತಿಯಿಂದ ಮಾದರಿ ರಚನೆ**

ಕದಿಕೆ ತುಳುಸಂಘದ ವತಿಯಿಂದ 'ಗ್ರಾಮೀಣ ಸೊಗಡು' ಎಂಬ ಮಾದರಿ ಗ್ರಾಮದ ಕಲ್ಪನೆಯ ಮಾದರಿ ರಚನೆ ಮತ್ತು ಪ್ರದರ್ಶನ ದಿನಾಂಕ 12-01-2018ರಂದು ನಡೆಯಿತು. ನಾಡಿನ ಕಾರಣಿಕದ ತುಳು ದೈವಗಳ ಪರಿಚಯವನ್ನು ನೀಡಲಾಯಿತು.

**ಅಂತರ್ ಕಾಲೇಜು ಸ್ಪರ್ಧೆ 13-01-2018**

ವಿವೇಕಾನಂದ ಜಯಂತಿಯ ಪ್ರಯುಕ್ತ ಪುತ್ತೂರು ವಿವೇಕಾನಂದ ಕಾಲೇಜಿನಲ್ಲಿ ನಡೆದ ವಿವಿಧ ಸ್ಪರ್ಧೆಗಳಲ್ಲಿ ಪದವಿ ವಿಭಾಗದ ಒಟ್ಟು 12 ವಿದ್ಯಾರ್ಥಿಗಳು ಭಾಗವಹಿಸಿದ್ದರು.

**'ಸಮರ್ಥ್-2018' ಯುವಜನೋತ್ಸವ 13.1.18**

ವಿವೇಕಾನಂದರ 155ನೇ ವರ್ಷಾಚರಣೆ ಪ್ರಯುಕ್ತ ಪದವಿ ಕಾಲೇಜಿನ ಪ್ರಬೋಧ ವಾಣಿಜ್ಯ ಸಂಘ ಮತ್ತು ಐ.ಕ್ಯೂ.ಎ.ಸಿ. ಆಶ್ರಯದಲ್ಲಿ ಪದವಿ ಪೂರ್ವ ವಿದ್ಯಾರ್ಥಿಗಳಿಗೆ ಆಯೋಜಿಸಿದ "ಸಮರ್ಥ್-2018" ಯುವಜನೋತ್ಸವ ಕಾರ್ಯಕ್ರಮವನ್ನು ಕಾಲೇಜು ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಶಶಿಧರ ಮಾರ್ಲ ಉದ್ಘಾಟಿಸಿದರು. ವೇದಿಕೆಯಲ್ಲಿ ಶ್ರೀರಾಮ ವಿದ್ಯಾ ಕೇಂದ್ರದ ಸಂಚಾಲಕ ಶ್ರೀ ವಸಂತ ಮಾಧವ, ಕಾಲೇಜಿನ ಹಿರಿಯ ವಿದ್ಯಾರ್ಥಿ ಹಾಗೂ ಪ್ರಸ್ತುತ ಕುಕ್ಕೆ ಸುಬ್ರಹ್ಮಣ್ಯ ಕಾಲೇಜಿನ ಉಪನ್ಯಾಸಕ ಶಿವಪ್ರಸಾದ್ ಹಾಗೂ ಪದವಿ ಕಾಲೇಜಿನ ಪ್ರಾಚಾರ್ಯ ಕೃಷ್ಣಪ್ರಸಾದ ಕಾಯರ್‌ಕಟ್ಟೆ ಉಪಸ್ಥಿತರಿದ್ದರು.

ಸಮಾರೋಪ ಕಾರ್ಯಕ್ರಮದಲ್ಲಿ ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರು ಡಾ। ಪ್ರಭಾಕರ ಭಟ್ ಕಲ್ಲಡ್ಕ ಭಾಗವಹಿಸಿ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಶಿಸ್ತಿಗಾಗಿ ನಿಯಮಗಳನ್ನು ಪಾಲಿಸಲಾಗುತ್ತದೆ. ಈ ನಿಯಮಗಳು ವಿದ್ಯಾರ್ಥಿಗಳ ರಕ್ಷಣೆಗೆ ಹೊರತು ಶಿಕ್ಷೆಗಲ್ಲ, ಅವರ ಸರ್ವತೋಮುಖ ಬೆಳವಣಿಗೆಗೆ ಈ ಸೂತ್ರ ಅಳವಡಿಸಲಾಗುತ್ತಿದೆ. ಇಂತಹ ಶಿಕ್ಷಣ ಪಡೆದ ವಿದ್ಯಾರ್ಥಿಗಳು ಪ್ರಸ್ತುತ ವಿವಿಧ ಕ್ಷೇತ್ರದಲ್ಲಿ ಯಶಸ್ಸನ್ನು ಸಾಧಿಸಿದ್ದಾರೆ ಎಂಬುದು ಹೆಮ್ಮೆಯ ಸಂಗತಿ ಎಂದರು. ಪದವಿಪೂರ್ವ ವಿಭಾಗದ ಒಟ್ಟು 353 ವಿದ್ಯಾರ್ಥಿಗಳು 14 ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರು. ವಿದ್ಯಾರ್ಥಿಗಳಾದ ಭವ್ಯ ಕಾರ್ಯಕ್ರಮದ ವರದಿ ವಾಚಿಸಿ, ಅನುಷಾ ಸ್ವಾಗತಿಸಿ, ಕಾರ್ಯಕ್ರಮವನ್ನು ನಿರೂಪಿಸಿ, ವಂದಿಸಿದರು.

**ಅಂತರ್ ಕಾಲೇಜು ಸ್ಪರ್ಧೆ 17-01-2018:**

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಬಿಸಿನೆಸ್ ಮ್ಯಾನೇಜ್‌ಮೆಂಟ್ ಕಾಲೇಜು ಮಂಗಳೂರು ಇಲ್ಲಿ ನಡೆದ "ವಿವೇಕೋತ್ಸವ 2018" ಕಾರ್ಯಕ್ರಮದಲ್ಲಿ ಪದವಿ ವಿಭಾಗದ ಒಟ್ಟು 7 ವಿದ್ಯಾರ್ಥಿಗಳು ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿರುತ್ತಾರೆ. ರಸಪ್ರಶ್ನೆ ಸ್ಪರ್ಧೆಯಲ್ಲಿ ಅಂತಿಮ ಬಿಕಾಂ ಶಿವಾನಂದ ಮತ್ತು ಪ್ರಮೋದ್ ಪ್ರಥಮ ಸ್ಥಾನ ಪಡೆದಿರುತ್ತಾರೆ.

**ಪ್ಲಾಸ್ಟಿಕ್ ದುಷ್ಪರಿಣಾಮಗಳ ಬಗ್ಗೆ ಮಾಹಿತಿ:**

ಎಸ್.ವಿ.ಎಸ್ ಕಾಲೇಜಿನ ನಿವೃತ್ತ ಕನ್ನಡ ಉಪನ್ಯಾಸಕರಾದ ಶ್ರೀ ರಾಜಮಣಿ ರಾಮಕುಂಜ ಇವರು ಪ್ಲಾಸ್ಟಿಕ್ ಮುಕ್ತ ಸಮಾಜದ ಅಗತ್ಯತೆ-ಯ ಬಗ್ಗೆ ದಿನಾಂಕ 22-01-2018ರಂದು ದೃಶ್ಯ ಪ್ರಾತ್ಯಕ್ಷಿಕೆಯ ಮೂಲಕ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಶ್ರೀ ಡಾ। ಪ್ರಭಾಕರ ಭಟ್ ಕಲ್ಲಡ್ಕ ವಹಿಸಿದ್ದರು. ವಾಣಿಜ್ಯಶಾಸ್ತ್ರ ಉಪನ್ಯಾಸಕಿ ಶ್ರೀಮತಿ ಸುಕನ್ಯಾ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು. ಕನ್ನಡ ಉಪನ್ಯಾಸಕ ಶ್ರೀ ಯತಿರಾಜ್ ವಂದಿಸಿದರು.

**Carrier Guidence program 25.1.2018**

ಮಂಗಳೂರಿನ ಶ್ರೀನಿವಾಸ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜಿನ MBA departmentನ ಆಸಿಸ್ಟೆಂಟ್ ಪ್ರೊಫೆಸರ್‌ಗಳಾದ ಮಲ್ಲಿಕಾ, ವೀಣಾ ಎಸ್, ರೈ ಹಾಗೂ ರಶ್ಮಿ ಇವರು ಕಾಲೇಜಿನ IQAC ಕಡೆಯಿಂದ ಶ್ರೀರಾಮ ಪದವಿ ಕಾಲೇಜಿನ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ Carrier Guidence program ನಡೆಸಿಕೊಟ್ಟರು. ಒಟ್ಟು 112 ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆದು-ಕೊಂಡರು.

**ಸಾಂಸ್ಕೃತಿಕ ದಿನ : 26-01-2018**

ಪ್ರದೀಪ್ತ ಸಾಂಸ್ಕೃತಿಕ ಸಂಘದ ವತಿಯಿಂದ ಪದವಿ ಕಾಲೇಜಿನ ಪ್ರತಿಭಾ ದಿನೋತ್ಸವದ ಪ್ರಯುಕ್ತ ಸಾಂಸ್ಕೃತಿಕ ದಿನವನ್ನು ಆಚರಿಸಲಾಯಿತು. ಯಕ್ಷಗಾನ, ನಾಟಕ, ನೃತ್ಯ ವೈಭವ ಹಾಗೂ ಗೀತಾನೃತ್ಯ ಚಿತ್ರ ಸ್ಪರ್ಧೆಗಳನ್ನು ಏರ್ಪಡಿಸಲಾಯಿತು.

**ರಕ್ತದಾನ ಶಿಬಿರ 27.01.2018:**

ಶ್ರೀರಾಮ ಪದವಿ ಕಾಲೇಜಿನ ಟೀಮ್ ಆಶ್ರಯ ಮತ್ತು ಭಾರತೀಯ ರೆಡ್ ಕ್ರಾಸ್ ಘಟಕದ ಸಹಯೋಗದಲ್ಲಿ ನಡೆದ ರಕ್ತದಾನ ಶಿಬಿರ ಬಂಟ್ವಾಳದ ಶ್ರೀಕಾಂತ್ ಶೆಟ್ಟಿ ಉದ್ಘಾಟಿಸಿ "ಸಮಾಜದಲ್ಲಿ ಶುದ್ಧ ರಕ್ತ ಸಿಗಬೇಕಾದರೆ ಶುದ್ಧ ಮನಸ್ಸಿನಿಂದ ರಕ್ತ ದಾನಿಗಳಾಗಿ ಅನೇಕರು ಇಂದು ಇಲ್ಲಿ ಮುಂದೆ ಬಂದಿರುವುದು ಶ್ಲಾಘನೀಯ ಎಂದರು". ವೆನ್ಲಾಕ್ ಆಸ್ಪತ್ರೆಯ ವೈದ್ಯಾಧಿಕಾರಿ ಡಾ। ಶರತ್ ರಕ್ತದಾನದ ಮಹತ್ವವನ್ನು ವಿವರಿಸಿದರು. 54 ವಿದ್ಯಾರ್ಥಿಗಳು, ಉಪನ್ಯಾಸಕರು ಹಾಗೂ ಸಂಸ್ಥೆಯ ಹಿರಿಯರು ಈ ರಕ್ತದಾನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಯತಿನ್ ಕಲ್ಲಡ್ಕ, ಸ್ವರ್ಣ ಜ್ಯುವೆಲ್ಲರ್ಸ್ ಮಾಲಕ ರೂಪೇಶ್ ಆಚಾರ್ಯ, ಸಜಿಪ ಸುಭಾಷ್ ನಗರದ ರವಿಚಂದ್ರ ಪಂಬದ, ವಿನಾಯಕ ಅಲ್ಯುಮಿನಿಯಂ ಮೆಲ್ಕಾರ್‌ನ ಪುರುಷೋತ್ತಮ ಪೂಜಾರಿ ಹಾಗೂ ಟೀಮ್ ಆಶ್ರಯದ ಸಂಯೋಜಕ ಯತಿರಾಜ್ ಪೆರಾಜೆ, ಪದವಿ ವಿಭಾಗದ ಪ್ರಾಚಾರ್ಯ ಕೃಷ್ಣಪ್ರಸಾದ ಕಾಯರ್‌ಕಟ್ಟೆ ಉಪಸ್ಥಿತರಿದ್ದರು. ಭಾರತೀಯ ರೆಡ್ ಕ್ರಾಸ್ ಘಟಕದ ಸಂಯೋಜಕಿ ಸುಶ್ಮಿತಾ ಸಹಕರಿಸಿದರು.

**ಜಿಲ್ಲಾ ಸಂಸ್ಕೃತ ಸಮ್ಮೇಳನದಲ್ಲಿ ಭಾಗಿ 29.1.18**

ಪದವಿ ವಿಭಾಗದ ಸಂಸ್ಕೃತ ವಿದ್ಯಾರ್ಥಿಗಳು ಜಿಲ್ಲಾ ಸಂಸ್ಕೃತ ಸಮ್ಮೇಳನದಲ್ಲಿ ಭಾಗವಹಿಸಿ ವಸ್ತು ಪ್ರದರ್ಶನದ ಜೋಡಣೆಯಲ್ಲಿ ಪಾಲ್ಗೊಂಡರು

* ದಿನಾಂಕ 29-01-2018: ಮಂಗಳೂರು ವಿಶ್ವವಿದ್ಯಾನಿಲಯ ಗ್ರಾಮೀಣ ಮಟ್ಟದ ಮಹಿಳೆಯರ ಥ್ರೋಬಾಲ್ ಸ್ಪರ್ಧೆ ಬಂಟ್ವಾಳ ಶ್ರೀ ವೆಂಕಟರಮಣ ಸ್ವಾಮಿ ಕಾಲೇಜು ಇಲ್ಲಿ ನಡೆದ ಮಂಗಳೂರು ವಿಶ್ವವಿದ್ಯಾನಿಲಯ ಗ್ರಾಮೀಣ ಮಟ್ಟದ ಮಹಿಳೆಯರ ಥ್ರೋಬಾಲ್ ಸ್ಪರ್ಧೆಯಲ್ಲಿ ಪದವಿ ವಿಭಾಗದ ಹುಡುಗಿಯರ ತಂಡ ಭಾಗವಹಿಸಿರುತ್ತದೆ.



**ವಿದ್ಯಾಭಾರತಿ ಜಿಲ್ಲಾ ಪ್ರಮುಖರ ಬೈಠಕ್**



**ವಗ್ಗದಲ್ಲಿ ನಡೆದ ಸ್ಥಾನೀಯ ಬೈಠಕ್**



**ಅಲ್ಲಿಪಾದೆಯಲ್ಲಿ ನಡೆದ ಸ್ಥಾನೀಯ ಬೈಠಕ್. 80ಜನ ಪೋಷಕರು ಭಾಗವಹಿಸಿದ್ದರು. ಸಂಸ್ಥೆಯ ಹಿರಿಯರು ಡಾ. ಪ್ರಭಾಕರ ಭಟ್ ಕಲ್ಲಡ್ಕ ಇವರು ಮಾರ್ಗದರ್ಶನ ಮಾಡಿದರು.**